ಪ್ರಮಾಣೀಕರಿಸಲಾದ ದಿನಾಂಕಃ **17.07.2025.**

<u>ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ. ಕೆ . ಪಿ. ಬಿ ವಕೀಲರಿಂದಃ</u>

ನನ್ನ ಮತ್ತು 2 ನೇ ಪ್ರತಿವಾದಿಯ ವಕೀಲರು ಒಬ್ಬರೇ ವಕೀಲರು ಹೇಳಿದಂತೆ ಸಾಕ್ಷ್ಯವನ್ನು ಕೊಡುತ್ತಿದ್ದೇನೆ. ಸರ್ವೆ ನಂ 77/16 ನಿಟ್ಟೂರು ಗ್ರಾಮದಲ್ಲಿ ಸರ್ಕಾರಿ ಕೆರೆ ಇದೆ ಎಂದರೆ ಸರಿ. ಈ ಜಾಗಕ್ಕೆ ಹೋಗಲು ಬಾಳೆಲೆ ಕಾರ್ಮಾಡು ಮುಖ್ಯ ರಸ್ತೆಯಿಂದ ಒಂದು ರಸ್ತೆ ಇದೆ ಎಂದರೆ ಸರಿಯಲ್ಲ. ಸುಮಾರು 13 ಸರ್ವೆ ನಂಬರ್‌ಗಳ ತೋಟಗಳನ್ನು ದಾಟಿ ಹೋಗಬೇಕಾಗುತ್ತದೆ. ಬಾಳೆಲೆ ಕಾರ್ಮಾಡು ರಸ್ತೆಯಿಂದ ಪೈಸಾರಿ ಕೆರೆಯ ನಡುವೆ ಸರ್ವೆ ನಂ 99 ರಲ್ಲಿ ಕಡಂಗ ಇದೆ ಎಂದರೆ ಸರಿ. ಕಡಂಗವನ್ನು ಸಾಮಾನ್ಯವಾಗಿ ರಸ್ತೆಯಾಗಿ ಉಪಯೋಗಿಸುತ್ತಾರೆಂದರೆ ಕೆಲವೊಮ್ಮೆ ಉಪಯೋಗಿಸಲು ಸಾಧ್ಯವಿರುತ್ತದೆ ಕೆಲವೊಮ್ಮೆ ಉಪಯೋಗಿಸಲು ಸಾಧ್ಯವಿರುವುದಿಲ್ಲ. ಸರ್ವೆ ನಂ 99 ರಲ್ಲಿರುವ ಕಡಂಗದಲ್ಲಿ ಟಾರ್ ರಸ್ತೆ ಇಲ್ಲ, ಸರ್ವೆ ನಂ 98 ರಲ್ಲಿ ಇನ್ನೊಂದು ಕಡಂಗವಿದ್ದು ಈ 2 ಕಡಂಗಗಳನ್ನು ಒಡೆದು ಮಧ್ಯದಲ್ಲಿ ಟಾರ್ ರಸ್ತೆ ಇರುತ್ತದೆ.

ನಿ. ಡಿ. 4 ಗ್ರಾಮ ನಕ್ಷೆಯಲ್ಲಿ ಸರ್ವೆ ನಂ 98 ಮತ್ತು ಸರ್ವೆ ನಂ 99, 2 ಕಡಂಗಗಳನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸರ್ವೆ ನಂ 99 ಕಡಂಗದ ಪಕ್ಕದಲ್ಲಿ ಮುಖ್ಯ ರಸ್ತೆ ಇದೆ ಎಂದರೆ ಸರಿ. ಚೇರಂಡ ಕುಟುಂಬದವರು ಸರ್ವೆ ನಂ 99 ಕಡಂಗವನ್ನು ರಸ್ತೆಯನ್ನಾಗಿ ಬಳಸುತ್ತಿದ್ದಾರೆ ಎಂದರೆ ಸರಿಯಲ್ಲ, ಮೇಲೆ ಹೇಳಿದಂತೆ 2 ಕಡಂಗಗಳಲ್ಲಿ ಟಾರ್ ರಸ್ತೆ ಇರುತ್ತದೆ. ಸರ್ವೆ ನಂ 99 ರಲ್ಲಿ 200 ಮೀಟರ್‌ಷ್ಟು ಟಾರ್ ರಸ್ತೆ ಇದ್ದು, ಬೋಲ್ಡರ್ಸ್ ರಸ್ತೆ 300 ಮೀಟರ್‌ಷ್ಟು ರಸ್ತೆ ಮುಂದಕ್ಕೆ ಹೋಗುತ್ತದೆ ಎಂದರೆ ನಾನು ಆ ರಸ್ತೆ ಹೋಗಿಲ್ಲ, ನನಗೆ ಗೊತ್ತಿಲ್ಲ, ಮುಂದುವರೆದು ಸರ್ವೆ ನಂ 99 ರಲ್ಲಿ ಯಾವುದೇ ರಸ್ತೆ ಇಲ್ಲ ಸರ್ವೆ ನಂ 99 ಮತ್ತು ಸರ್ವೆ ನಂ 98 ರ ನಡುವೆ boundary ಅಲ್ಲಿ ರಸ್ತೆ ಹಾದುಹೋಗುತ್ತದೆ. ಸರ್ವೆ ನಂ 99 ರಲ್ಲಿ ರಸ್ತೆ ಮಾಡಿದರೆ ಪೈಸಾರಿ ಕೆರೆವರಗೊ ಹೋಗಬಹುದು ಎಂದರೆ ಬೇರೆ ದಾರಿ ಇದೆ ಎಂದು ಉತ್ತರಿಸುತ್ತಾರೆ. ಆ ಇನ್ನೊಂದು

ದಾರಿ ಸರ್ವೆ ನಂ 77/5, 77/22 ಗಾಗಿ ಬಂದು ಸರ್ವೆ ನಂ 77/16 ರಸ್ತೆಗೆ ಸೇರುತ್ತದೆ. ಆದರೆ ನಿ. ಡಿ. 4 ರಲ್ಲಿ ಈ ರಸ್ತೆ ಕಾಣುತ್ತಿಲ್ಲ, 80 ವರ್ಷದಿಂದ ಇದೇ ರಸ್ತೆಯ ಮೂಲಕ ಪೈಸಾರಿ ಕೆರೆಗೆ ದಾರಿ ಇರುತ್ತದೆ. ನಾನು ಈಗ ಹೇಳಿದ ರಸ್ತೆ , 80 ವರ್ಷದಿಂದ ಹುಟ್ಟಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ನಂ 99 ರಲ್ಲಿ ಕಡಂಗಕ್ಕಾಗಿ ರಸ್ತೆಯಾಗಿ ಪ್ರತಿವಾದಿಗಳ ಮನೆಗೆ ಮತ್ತು ಆಸ್ತಿಗಳಿಗೆ ಹೋಗುತ್ತಿದ್ದು, 2018 ರಲ್ಲಿ ಒಬ್ಬೊಬ್ಬರೆ ಇದನ್ನು ಮುಚ್ಚಿ ಕಾಫಿ ತೋಟ ಮಾಡಿಕೊಂಡಿರುವುದರಿಂದ ಆ ದಾರಿ ಬಂದ್ ಆಗಿದೆ ಎಂದರೆ ಸರಿಯಲ್ಲ.

ಸರ್ವೆ ನಂ 77/5, 77/22 ರಸ್ತೆಯು ವಾದಿಯ ಖಾಸಗಿ ರಸ್ತೆ, ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ. ಸರ್ವೆ ನಂ 99 ಕಡಂಗಕ್ಕಾಗಿ ರಸ್ತೆ ಮಾಡಲು ತಹಶೀಲ್ದಾರ್, ಆರ್ ಐ ರವರು ಸ್ಥಳ ಪರಿಶೀಲನೆಗಾಗಿ ಬಂದು ಅಲ್ಲಿ ರಸ್ತೆ ಮಾಡಬೇಕೆಂದು ವರದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮುಂದುವರೆದು ನಾನು ಅದಕ್ಕೆ ಸಹಿ ಮಾಡಲಿಲ್ಲ ಮತ್ತು ತಹಶೀಲ್ದಾರ್ ರವರಿಗೆ 1945 ರ ನ್ಯಾಯಾಲಯದ ಆದೇಶವನ್ನು ಸ್ಥಳದಲ್ಲಿ ತೋರಿಸಿರುತ್ತೇನೆ.

ಮಲ್ಲೆಂಗಡ ಸುಬ್ರಮಣಿ ಮತ್ತು ವಾದಿ ದಾಯಾದಿಗಳು ಎಂದರೆ ಸರಿ. ನಾನು ಈ ಸುಬ್ರಮಣಿಯ GPA holder ಎಂದರೆ ಸರಿ. ಅವರು ಹಾಕಿದ ದಾವೆ O.S. 94/2019 ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಾನೇ ನಡೆಸುತ್ತಿದ್ದೇನೆ. ಆ ದಾವೆ ಹಾಕಿದಾಗ ನಾನು GPA ಪಡೆದಿರಲಿಲ್ಲ 2025 ಅವರು GPA ಕೊಟ್ಟರು ಎಂದರೆ ಸರಿ. GPA ಮೈಸೂರಿನಲ್ಲಾಯಿತು ಎಂದರೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿಗಳೆಲ್ಲ ಸೇರಿ ಸುಬ್ರಮಣಿಯಿಂದ GPA ಮೈಸೂರಿನಲ್ಲಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಮತ್ತು ಪ್ರತಿವಾದಿಗಳಿಗೆ ಸರ್ವೆ ನಂ 99 ಕಡಂಗಕ್ಕಾಗಿ ರಸ್ತೆ ಇರುವುದರಿಂದ ವಾದಿಯವರ ದಾವಾಸ್ವತ್ತಿನಲ್ಲಿ ರಸ್ತೆಯನ್ನು ಉಪಯೋಗಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಸ್ನೇಹಿತನಾದ ಕಾರಣ ಅವರಿಗೆ ಸಹಾಯ ಮಾಡಲು

ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.